ಬಯಸಿದ ಸೂರ್ಯನಿಂದಲೇ ತನ್ನ ತಂದೆಯ ಹತ್ಯೆಯಾಗಿದೆ. ಅದನ್ನು ಮರೆ ಮಾಚುವ ಪ್ರಯತ್ನ ಅವನ ಮನೆಯವರು ಮಾಡಿದ್ದಾರೆ ಎಂಬುದನ್ನು ಜೀರ್ಣಿಸಿಕೊಳ್ಳಲು ಇನ್ನೂ ಅವಳಿಂದಾಗುತ್ತಿಲ್ಲ. ಕಹಿಸತ್ಯ ಮುಳ್ಳಿನಂತೆ ಸದಾ ಹೃದಯವನ್ನು ಇರಿಯುವಾಗ ಇನ್ನು ಅಂಥವರ ನಡುವೆ ಬಾಳಲು ಸಾಧ್ಯವೇ? ಸತ್ಯ ಹೊರ ಬಂದಾಗ ಎಲ್ಲರ ಮುಖವಾಡ ಕಳಚಿಬಿದ್ದಿತ್ತು. ನಂಬಿಕೆ, ವಿಶ್ವಾಸಕ್ಕೆ ಕೊಡಲಿ ಏಟು ಬಿದ್ದಂತಾಗಿತ್ತು.

ಹೃದಯಲ್ಲಿದ್ದ ಕೋಲಾಹಲವನ್ನು ಮೆಟ್ಟಿ ನಿಲ್ಲುವ ಪ್ರಯತ್ನದಲ್ಲೇ ಕೈಯಲ್ಲಿ ಪುಡಿಗಾಸು, ಒಂದಷ್ಟು ಬಟ್ಟೆಬರೆ, ಪುಸ್ತಕಗಳನ್ನು ಹೊತ್ತು ಅಲ್ಲಿಂದ ಹೊರಟು ಬಂದಿದ್ದಾಗಿತ್ತು.

'ಇಷ್ಟು ದೊಡ್ಡ ನಗರದಲ್ಲಿ ಹೋಗುವುದೆಲ್ಲಿಗೆ? ನೋವು, ಸ್ವಾಭಿಮಾನ, ಹಠ ಆ ಮನೆಯನ್ನು ತೊರೆದು ಬಂದುದ್ದಾಗಿತ್ತು. ಬಸ್‌ಸ್ಟಾಂಡಿನಲ್ಲಿ ಬಂದು ಕುಳಿತು ಹೋಗಿ ಬರುವ ಬಸ್ಸುಗಳನ್ನೆಲ್ಲಾ ದಿಕ್ಕು ತೋಚದವಳಂತೆ ಕುಳಿತಾಗಲೇ ಅವಳ ಮೊಬೈಲಿಗೆ ಆದರ್ಶ ಕರೆ ಮಾಡಿದ್ದ.

'ಹಲೋ ಅಪೂರ್ವ..' ಅವನ ದನಿ ಕೇಳಿ ಅವಳಿಗೆ ಜೀವ ಜಲ ಮರಳಿ ಬಂದಂತಾಗಿತ್ತು. ಆ ಕ್ಷಣಕ್ಕೆ ಅವನೇ ದೊಡ್ಡ ಆಸರೆ ಎಂಬಂತಾಗಿತ್ತು. ಏನೂ ಮಾತನಾಡಲು ತೋಚದೇ ಅಸಹಾಯಕತೆಯಿಂದ ಬಿಕ್ಕಳಿಸಿದಾಗ ಆದರ್ಶ ತಡೆಯದಾದ.

'ಏನಾಯ್ತು ಅಪೂರ್ವ? ಎಲ್ಲಿದ್ದೀರಾ? ಯಾಕೆ ಅಳ್ತಿದ್ದೀರಾ?'

'ನಾನು ಆ ಮನೆ ಬಿಟ್ಟು ಬಂದಿದ್ದೀನಿ ಆದರ್ಶ..' ಬಿಕ್ಕಳಿಸುತ್ತ, ತಡೆ ತಡೆದು ನುಡಿದಳು.

'ಹೌದಾ..? ಈಗೆಲ್ಲಿದ್ದೀರಾ ಹೇಳಿ..? ನಾನೀಗ್ಲೇ ಅಲ್ಲಿಗೆ ಬರ್ತಾ ಇದ್ದೀನಿ..' ಉದ್ವೇಗದಿಂದ ನುಡಿದಿದ್ದ.

ಅಪೂರ್ವ ತಿಳಿಸಿದ ವಿಳಾಸಕ್ಕೆ ಒಡನೆಯೇ ಧಾವಿಸಿ ಬಂದಿದ್ದ.

ಅಪೂರ್ವಳ ಕಳೆಗುಂದಿದ ಮುಖ ಕಂಡು, ಅವಳಿದ್ದ ಪರಿಸ್ಥಿತಿ ಕಂಡು ಆದರ್ಶ ದ್ರವಿಸಿ ಹೋದ.

ಏನೊಂದೂ ಪ್ರಶ್ನಿಸದೇ ಅವಳನ್ನು ನೇರವಾಗಿ ಮನೆಗೆ ಕರೆ ತಂದಿದ್ದ.

ಅಪೂರ್ವಳನ್ನು ವಿದ್ಯಾ ಆದರದಿಂದಲೇ ಸ್ವಾಗತಿಸಿದ್ದರು. ಈ ಮುಂಚೆ ಎಂದೂ ಅಲ್ಲಿಗೆ ಬರುವ ಅವಕಾಶ ಅಪೂರ್ವಳಿಗೆ ಒದಗಿರಲಿಲ್ಲ. ಆದರೆ ಇಂಥ ಸ್ಥಿತಿಯಲ್ಲಿ ಬರಬೇಕಾಯಿತಲ್ಲ ಎಂದು ಮಿಡುಕಿದಳು.

'ಅವ್ಳನ್ನೇನೂ ಕೇಳ್ಬೇಡಾ.. ಆಕೇನೇ ತಿಳಿಸುವ ತನಕ.. ಸುಮ್ನಿದ್ದು ಬಿಡು..' ಎಂದು ಆದರ್ಶ ತಾಯಿಗೆ ತಾಕೀತು ಮಾಡಿದ್ದ. ಅವಳಿಗೆ ಉಳಿಯಲು ಕೋಣೆ ತೋರಿಸಿ ಉಪಾಹಾರ ನೀಡಿದರು. ಅಪೂರ್ವಳ ಮನಸ್ಸು ತೀರಾ ಘಾಸಿಗೊಂಡಿದ್ದರಿಂದ ಯಾವುದೂ ಬೇಕೆನಿಸಲಿಲ್ಲ.

ಕೋಣೆಗೆ ಬಂದು ಕದವಿಕ್ಕಿ ಹಾಸಿಗೆಯ ಮೇಲುರುಳಿದಾಗ ಹೃದಯದುಮ್ಮಳವೆಲ್ಲಾ ಭೋರ್ಗರೆದು ಬಂದಂತೆ ಒಂದೇ ಸಮನೆ ರೋಧಿಸಿದಳು. ಅಸಹಾಯಕತೆ, ಒಂಟಿತನ ತೀವ್ರವಾಗಿ ಬಾಧಿಸಿತ್ತು. ಆದರ್ಶನಿಗೆ ರಾತ್ರಿಯ ಪಾಳಿ ಇದ್ದದ್ದರಿಂದ ಅವಳಿಗೆ ತಿಳಿಸಲು ಬಂದಿದ್ದ.

'ಫೀಲ್ ಎಟ್ ಹೋಂ.. ಏನಾದ್ರೂ ಬೇಕಾದ್ರೆ ಸಂಕೋಚ ಪಡದೇ ಅಮ್ಮನ್ನ ಕೇಳಿ..' ಅವನೂ ಹೊರಟು ನಿಂತಾಗ ಅಪೂರ್ವ ಆರ್ತವಾಗಿ ಅವನೆಡೆಗೆ ನೋಡಿದಳು, 'ಆದರ್ಶ ಹೋಗ್ಲೇ ಬೇಕಾ? ನಿಮ್ಮ ಹತ್ರ ತುಂಬಾ ಮಾತನಾಡುವುದಿದೆ ನನ್ಗೆ..'

'ನಾಳೆ ಬೆಳಿಗ್ಗೆ ಬರ್ತೀನಿ.. ಆರಾಮಾಗಿ ಕೂತ್ಕೊಂಡು ಮಾತನಾಡೋಣ. ಇವತ್ತು ನೀವು ತುಂಬ ಡಿಸ್ಟರ್ಬ್ ಆಗಿದ್ದೀರ.. ನಿಮ್ಮ ಮನಸ್ಸು ತಹಬದಿಗೆ ಬರಲಿ.. ಶಾಂತವಾಗಿರಿ..' ಎಂದು ಸಂತೈಸಿ ಹೊರಟು ಹೋಗಿದ್ದ. ಆತ ಹೊರಟು ಹೋದ ಬಳಿಕ ಮತ್ತೆ ಮನಸ್ಸಿಗೆ ಬಿಕೋ ಎನಿಸಿತು.

ನಿಧಾನವಾಗಿ ಎದ್ದು ಹೊರ ಬಂದಾಗ ವಿದ್ಯಾ 'ಬಾಮ್ಮಾ.. ನಿನ್ಗೆ ಕುಡೀಲಿಕ್ಕೆ ಕಾಫಿ ತರಲಾ.. ?' ಎಂದು ಉಪಚರಿಸಿದರು. ಆಕೆ ನೀಡಿದ ಕಾಫಿ ಕುಡಿದಾಗ ಹಿತವೆನಿಸಿತು. ಆಕೆಯ ಸ್ನೇಹಪೂರ್ವಕ ವರ್ತನೆ, ಬೇಗುದಿಯಿಂದ ಬಳಲುತ್ತಿದ್ದ ಮನಸ್ಸಿಗೆ ತಂಪೆರಚಿತು. ಆದರ್ಶನ ತಂದೆ ಶ್ರೀಧರ ರಾವ್ ಬಂದವರು ಅವಳನ್ನು ಆತ್ಮೀಯವಾಗಿ ಮಾತನಾಡಿಸಿದರು. ಮೂವರೂ ಕುಳಿತು ಲಘು ಹರಟೆ ಹೊಡೆಯುತ್ತ ಕುಳಿತಾಗ, ಆಕೆಗೆ ಆ ಮನೆ, ಪರಿಸರ, ಜನ ಅಪರಿಚಿತವೆನಿಸಲಿಲ್ಲ. ಅವರ ಸುಸಂಸ್ಕೃತ ನಡವಳಿಕೆ, ಮಾತುಕತೆಯ ನಡುವೆ ಅಪೂರ್ವಳಿಗೆ ತನ್ನ ನೋವು ಮರೆತಂತಾಗಿತ್ತು. ಆದರ್ಶನ ಅಪ್ರಸ್ತುತತೆ ಕೂಡಾ ಕಾಡದೇ ಅಪೂರ್ವ ಚೇತರಿಸಿಕೊಂಡಳು.

ಮರುದಿನ ಬೆಳಿಗ್ಗೆ ಆದರ್ಶ ಡ್ಯೂಟಿ ಮುಗಿಸಿ ಬಂದಾಗ, ಅಪೂರ್ವ ತನ್ನ ತಾಯಿಯೊಡನೆ ನಗುನಗುತ್ತ ಬೆರೆತು ಮಾತನಾಡುವುದನ್ನು ಕಂಡು ಬೆರಗಾದ. ಹಿಂದಿನ ದಿನ ನೋವಿನಲ್ಲಿ ಕಂಗಾಲಾಗಿ ಹೋಗಿದ್ದ ಅಪೂರ್ವಳನ್ನು ಸಂತೈಸಲು ನಾನಾ ಯೋಜನೆಗಳನ್ನು ಹಾಕಿ ಬಂದವನಿಗೆ ಆ ದೃಶ್ಯ ಆಪ್ಯಾಯಮಾನ ಎನಿಸಿತು. ಅಪೂರ್ವ ತನ್ನ ಕೈ ಹಿಡಿದು ಈ ಮನೆಗೆ ಬಂದರೆ, ಈ ದೃಶ್ಯ ನಿತ್ಯ ತನ್ನ ಕಣ್ಣಿಗೆ ಬೀಳುವುದೆಂದು ಮನಸ್ಸಿನಲ್ಲೇ ಮಂಡಿಗೆ ಮೆದ್ದ.

ಅವನು ನಿತ್ಯಕರ್ಮಗಳನ್ನು ಮುಗಿಸಿ ಸ್ನಾನ ಮಾಡಿ ಉಪಾಹಾರ ಮುಗಿಸಿದ ಬಳಿಕ ಅಪೂರ್ವಳೇ ಅವನನ್ನು ಮಾತಿಗೆ ಕರೆದಳು.

'ಆದರ್ಶ.. ನಾನು ಆ ಮನೆಯನ್ನು ಶಾಶ್ವತವಾಗಿ ಬಿಟ್ಟು ಬಂದಿದ್ದೀನಿ..' ಅಪೂರ್ವ ವಿದ್ಯಾರ ಎದುರೇ, ಗಂಭೀರವಾಗಿ ನುಡಿದಳು. ಅವರ ಪ್ರತಿಕ್ರಿಯೆ ತಿಳಿಯುವುದು ಕೂಡಾ ಅಗತ್ಯವೆನಿಸಿತ್ತು.

'ಗೊತ್ತು ನೀವು ಆ ಮನೆ ಬಿಟ್ಟು ಹೊರಟು ಬಂದೊಡನೆ.. ಸೂರ್ಯ ನನಗೆ ಕರೆ ಮಾಡಿ ನಿಮ್ಮನ್ನು ಕರೆದೊಯ್ಯುವಂತೆ ತಿಳಿಸಿದ.. ಆದರೆ ಕಾರಣ ಮಾತ್ರ ತಿಳಿಸಲಿಲ್ಲ. ನೀವು ಈ ಮನೇಲಿರೋದನ್ನು ಕೂಡಾ ಆತ ಕರೆ ಮಾಡಿ ಖಾತ್ರಿ ಪಡಿಸಿಕೊಂಡ.. ಏಕೆ ಏನಾಯ್ತು ಅಪೂರ್ವ?'

ಅಪೂರ್ವ ಸೂರ್ಯನೇ, ತನ್ನ ತಂದೆಯ ಹತ್ಯೆ ನಡೆಸಿದ್ದೆಂದು ತಿಳಿಸಿದಾಗ, ಆದರ್ಶ ಮತ್ತು ವಿದ್ಯಾ ಇಬ್ಬರೂ ಗರಬಡಿದವರಂತಾದರು.

'ಓಹೋ..! ಅದಕ್ಕೇ ಅಣ್ಣ ಅತ್ತಿಗೆ ನಿನ್ನನ್ನು ತಂದು ಸಾಕಿದ್ದು, ಕಾಲೇಜು ಸೇರಿಸಿದ್ದು, ಅಲ್ವಾ..?' ವಿದ್ಯಾ ನುಡಿದಾಗ ಅಪೂರ್ವಳ ಮನಸ್ಸು ಕಹಿಯಾಯಿತು.

**ಅಧ್ಯಾಯ 25**

ತಾನು ಸೂರ್ಯನನ್ನು ಮೆಚ್ಚಿಕೊಂಡಿದ್ದು, ತಮ್ಮಿಬ್ಬರ ನಿಶ್ಚಿತಾರ್ಥ ನೆರವೇರಿದ ಬಳಿಕ ತಾನೇ ಅದನ್ನು ಮುರಿದು ಬಂದಿರುವ ಸಂಗತಿ ಮಾತ್ರ ಹೇಳಲು ಅಪೂರ್ವಳಿಗೆ ಬಾಯಿ ಬರಲಿಲ್ಲ.

'ಪರ್ವಾಗಿಲ್ಲ ಅಪೂರ್ವ.. ನೀನು ಆರಾಮಾಗಿ ಇಲ್ಲೇ ಇರು..ನಮ್ದೇನೂ ಅಭ್ಯಂತರವಿಲ್ಲ...' ವಿದ್ಯಾ ಉದಾರ ಮನಸ್ಸಿನಿಂದ ನುಡಿದಾಗ ಅಪೂರ್ವ ಹಿಡಿಯಷ್ಟಾದಳು.

'ನನ್ಗೆ ನೌಕರಿ ಸಿಕ್ಕಿದೆ.. ಸೇರಿಕೊಳ್ಳಲು ಸ್ವಲ್ಪ ಸಮಯವಿದೆ... ಅದುವರೆಗೂ ನಿಮ್ಗೆ ಅಭ್ಯಂತರವಿಲ್ಲದೇ ಹೋದರೆ ಇಲ್ಲಿರುತ್ತೇನೆ... ಆಮೇಲೆ ಯಾವ್ದಾದ್ರೂ ಪಿ.ಜಿ ಸೇರಿಕೊಳ್ತೀನಿ..' ತನ್ನ ಅಸಹಾಯಕತೆ ವ್ಯಕ್ತಪಡಿಸಿದಳು. ದುಡಿಮೆಯ ಹಾದಿಗೆ ಇಳಿಯುವ ತನಕ ಆರ್ಥಿಕ ಅವಲಂಬನೆ ಅನಿವಾರ್ಯವಾಗಿತ್ತು.

'ಪಿ.ಜಿ ಎಲ್ಲಾ ಬೇಡಮ್ಮಾ.. ನೀನು.. ಸದಾ ಇದೇ ಮನೇಲಿರ್ಬೇಕು ಅನ್ನೋದು ನಮ್ಮಾಸೆ.. ನನ್ಮಗ ನಿನ್ಮೇಲೆ ಜೀವನೇ ಇಟ್ಟಿದ್ದಾನೆ... ಮದ್ವೆ ಆದ್ರೆ ನಿನ್ನೇ ಆಗ್ತೀನಿ ಅಂತ ಕೂತಿದ್ದಾನೆ.. ನೀನು ಮನಸ್ಸು ಮಾಡಿದ್ರೆ.. ಮುಹೂರ್ತ ನೋಡೇ ಬಿಡ್ತೀನಿ.. ನಾನು..' ವಿದ್ಯಾ ಆತುರ ತೋರಿದಾಗ ಅಪೂರ್ವ ಉಗುಳು ನುಂಗಿದಳು. ಒಂದು ಸಂಬಂಧದಿಂದ ಈಗ ತಾನೇ ಕಳಚಿಕೊಂಡು ಬಂದು ಹೊಸದಕ್ಕೆ ಅಷ್ಟು ಸುಲಭವಾಗಿ ಬೆಸೆದುಕೊಳ್ಳುವುದು ಸುಲಭ ಸಾಧ್ಯವಾಗಲಿಲ್ಲ.

'ಅಪೂರ್ವ ನಿನ್ನ ಆರ್ಥಿಕ ಸ್ವಾವಲಂಬನೆಗೆ ನಾವು ಯಾವತ್ತೂ ಅಡ್ಡಿ ಪಡಿಸೋದಿಲ್ಲಮ್ಮಾ.. ನೀನು ಕೆಲಸಕ್ಕೆ ಸೇರು.. ನಿನ್ನಿಷ್ಟ ಬಂದ ಹಾಗೆ ನೀನಿರು.. ನೀವಿಬ್ರೂ ನಗು ನಗುತ್ತಾ ಜೊತೆಯಾಗಿ ಚೆನ್ನಾಗಿ ಬಾಳೋದಷ್ಟೇ ನಮ್ಗೆ ಮುಖ್ಯ... ನಮ್ಗೂ ನಿನ್ನಂತೆ ಕಲಿತಿರೋ, ಎಲ್ಲರನ್ನೂ ಆದರದಿಂದ ಗೌರವಿಸುವ, ಎಲ್ಲರ ಜೊತೆ ಪ್ರೀತಿಯಿಂದ ಹೊಂದಿಕೊಂಡು ಹೋಗುವ ಸೊಸೆ ಬೇಕು.. ಅದೆಲ್ಲಾ.. ಗುಣ. ನಿನ್ನಲ್ಲಿದೆ.. ಆ ದೇವ್ರೇ ನಿನ್ನನ್ನು ಇಲ್ಲಿಗೆ ಕಳಿಸಿದ್ದಾನೆ. ನಮ್ಜೊತೆನೇ ಶಾಶ್ವತವಾಗಿ ಇದ್ದು ಬಿಡು...' ವಿದ್ಯಾರ ಆಗ್ರಹ ಕಂಡು ಆದರ್ಶ ತಾಳದಾದ.

'ಅಮ್ಮಾ ಹಾಗೆಲ್ಲ.. ಒತ್ತಡ ಹೇರಬೇಡ. ಅವ್ರಿಗೂ ಏನೇನೋ ಅಭಿಪ್ರಾಯಗಳಿರುತ್ತಲ್ವಾ.. ಅದಕ್ಕೂ ನಾವು ಬೆಲೆ ಕೊಡಬೇಕಲ್ವಾ ..ನಿನ್ಗೇನೋ ಆತುರ.. ಅವ್ರ ಮನಸಲ್ಲಿ ಏನಿದೆಯೋ..' ಎಂದವನು ಅಪೂರ್ವಳನ್ನುದ್ದೇಶಿಸಿ, 'ಅಮ್ಮನ ಮಾತಿಗೆ ಕಿವಿಗೊಡಬೇಡಿ... ನೀವು ಎಷ್ಟು ದಿನ ಇಲ್ಲಿರ್ತೀರೋ.. ಹಾಯಾಗಿರಿ.. ನಿಮ್ದೇ ಮನೆ ಅಂತ ತಿಳ್ಕೊಳ್ಳಿ